ಮೇಲ್ದರ್ಜೆಗೇರಿಸಲು ನಿರ್ಧರಿಸಲಾಗಿದೆ. ಈ ಉದ್ದೇಶಕ್ಕಾಗಿ ಪರಿಷ್ಕೃತ ಅಂದಾಜು ವೆಚ್ಚ, ನೀಲಿ ನಕ್ಷೆಗಳನ್ನು ತಯಾರಿಸಿ, ಆಡಳಿತಾತ್ಮಕ ಅನುಮೋದನೆ ಪಡೆಯಲು ಪ್ರಸ್ತಾವನೆ ಸಲ್ಲಿಸುವಲ್ಲಿ ಕಾಲಾವಕಾಶ ಅಗತ್ಯವಿದೆ. ಈ ಕಾರಣದಿಂದಾಗಿ ಕೆಲಸ ಪ್ರಾರಂಭ ಮಾಡಲು ವಿಳಂಬವಾಗಿರುತ್ತದೆ.

ಪರಿಸರ ಇಲಾಖೆಯ ಮಂಗಳೂರು ವಿಭಾಗೀಯ ಕಛೇರಿ

1324 (1687) ಶ್ರೀ ಯು.ಆರ್.ಸಭಾಪತಿ (ಉಡುಪಿ) : ಮಾನ್ಯ ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಪರಿಸರ ಇಲಾಖೆಯ ಮಂಗಳೂರು ವಿಭಾಗೀಯ ಕಛೇರಿ ಹಾಗೂ ಅಲ್ಲಿನ ಆಡಳಿತ ವರ್ಗ ಸಿಬ್ಬಂದಿಗಳ ಕಾರ್ಯ ವ್ಯಾಪ್ತಿಗಳೇನು; ಈ ಮಂಜೂರಾತಿಯಾದ ಹುದ್ದೆಗಳೆಷ್ಟು? ಖಾಲಿ ಇರುವ ಹುದ್ದೆಗಳು ಯಾವುವು?

ಆ) ದಕ್ಷಿಣ ಕನ್ನಡ ಜಿಲ್ಲೆಯ ಮಂಗಳೂರಿನಲ್ಲಿ ಪರಿಸರ ಇಲಾಖಾ ವಿಭಾಗೀಯ ಕಛೇರಿಯ ಅಭಿವೃದ್ಧಿ ಕಾರ್ಯಕ್ಕಾಗಿ ಸರ್ಕಾರವು ಬಿಡುಗಡೆ ಗೊಳಿಸಿದ ಹಣವೆಷ್ಟು?

ಶ್ರೀ ಕೆ.ಎಚ್. ರಂಗನಾಥ್ (ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಸಚಿವರು) :

ಅ) ಮಂಗಳೂರಿನ ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯ ಕಾರ್ಯವ್ಯಾಪ್ತಿಯಲ್ಲಿ ಹಾಸನ, ದಕ್ಷಿಣ ಕನ್ನಡ, ಉಡುಪಿ ಕೊಡಗು ಹಾಗೂ ಚಿಕ್ಕಮಗಳೂರು ಜಿಲ್ಲೆಗಳು ಇರುತ್ತವೆ. ಈ ಕಛೇರಿಯಲ್ಲಿ ಮಂಜೂರು ಆದ ಹುದ್ದೆಗಳು 18 ಇದ್ದು, ಈ ಹುದ್ದೆಗಳ ಪೈಕಿ ಈ ಕೆಳಕಂಡ 6 ಹುದ್ದೆಗಳು ಖಾಲಿ ಇರುತ್ತವೆ:

1)	ಕಾನೂನು ಸಹಾಯಕರು	-	ಒಂದು
2)	ಪ್ರಥಮ ದರ್ಜೆ ಸಹಾಯಕರು	-	ಒಂದು
3)	ಶೀಘ್ರಲಿಪಿಗಾರರು	-	ಒಂದು
4)	ಸೀನಿಯರ್ ಪ್ರೋಗ್ರಾಮರ್	-	ಒಂದು
5)	ಬೆರಳಚ್ಚುಗಾರರು ಡಾಟ ಎಂಟ್ರಿ ಆಪರೇಟರ್	-	ಒಂದು
6)	ಜವಾನ: ವಾಚ್‌ಮೆನ್	-	ಒಂದು

ಆ) ವಿಭಾಗೀಯ ಕಛೇರಿಯ ಲ್ಯಾಬ್‌ನ್ನು ಮಂಗಳೂರಿನಲ್ಲಿ ಅಭಿವೃದ್ಧಿ ಪಡಿಸಲು 16 ಲಕ್ಷ ಅನುದಾನವನ್ನು ರಾಜ್ಯ ಸರ್ಕಾರ ಬಿಡುಗಡೆ ಮಾಡಿರುತ್ತದೆ.

ರಸ್ತೆಗಳ ನಿರ್ವಹಣ ಮೊತ್ತ

1325 (1533) ಶ್ರೀ ಸಭಾಪತಿ ಯು.ಆರ್ (ಉಡುಪಿ) : ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಮಳೆಯಿಂದ ತೀವ್ರ ಹಾನಿಗೊಳ್ಳುವ ಇಲಾಖಾ ರಸ್ತೆಗಳಿಗೆ ದುರಸ್ತಿಗೊಳಿಸಲು ಒದಗಿಸಿದ ಹಣ ಎಷ್ಟು; (1998-99, 1999-2000ನೇ ಸಾಲಿನಲ್ಲಿ)